I. ಯಾವ ಲಾಟಿನ ಛಡ ಸವಾಲ್‌ದಾರನಿಗೆ ಲಾಟ್ ವಪ್ಪಿಸಲ್ಪಡುವದೋ ಸದರೀ ಯವನೇ ಕ್ರಯದಾರನಾಗಿರತಕ್ಕದ್ದು.

II. ಯಾವ ಲಾಟಿನ ವಿಷಯದಲ್ಲಾದರೂ ತಕರಾರು ಸಂಭವಿಸಿದರೆ, ಅದು ಪುನಹಾ ಹರಾಜ್ ಡಾಕಲ್ಪಟ್ಟು ಮರಳಿ ವಿಕ್ರಯಿಸಲ್ಪಡುವದು.

III. ಪ್ರತಿ ಖರೀದಿದಾರನೂ, ವಂದು ಲಾಟ್ ಅವನ ಹೆಸರಿಗೆ ವಹಿಸಲ್ಪಟ್ಟು ಕೂಡ್ಲೆ ಅವನಿಂದ ಕೊಂಡುಕೊಳ್ಳಲ್ಪಟ್ಟ ಲಾಟಿನ ನಂಬರ್ ಮತ್ತು ತಪಸೀಲ್ ತೋರಿಸುವ ಬಗ್ಯಾಗಿ ಯಿಡಲ್ಪಟ್ಟ ಬುಕ್ಕಿನಲ್ಲಿ ಸದರೀ ಸ್ಥಳದಲ್ಲಿ ತನ್ನ ರುಜಾ ಮಾಡತಕ್ಕದ್ದು. ಸದರೀ ರುಜುವು, ಅವನಿಂದ ಡಿಪೋ ಲಾಟ್ ಕೊಂಡುಕೊಳ್ಳಲ್ಪಟ್ಟತೆಂಬ ಬಗ್ಯೆ ವಪ್ಪಿಕೆಯಾಗಿರತಕ್ಕದ್ದು.

IV. ಪ್ರತಿ ಖರೀದಿದಾರನೂ, ಹರಾಜು ತಾರೀಖು ಲಾಗಾಯತು 3 ದಿವಸದ ವಳಗಾಗಿ ಸೂಪರ್‌ಟೆಂಡೆಂಟರವರ ಲೆಟರ್ ಆಫ್ ಆಡ್ವೈಸ್ ಯಾನೆ ಮೇಲ್ ಕಾಗದದ ವಜನೆ ಅತ್ಯಂತ ಸವಿೂಪವಾದ ಖಜಾನೆಯಲ್ಲಿ ತನ್ನಿಂದ ಸಲ್ಲಬೇಕಾದ ವಟ್ಟು ವೊಬಲಗಿನ ಶೈಕೀ ಕೇಕಡಾ 25ರಂತೆ ಆಗುವ ವೊಬಲಗನ್ನು ಠೇವಣಿ ಯಿಡತಕ್ಕದ್ದು. ಯಾವ ಖರೀದಿದಾರನಾಗಲೀ ಈ ನಿಬಂಧನೆಗೆ ತಪ್ಪುವ ಪಕ್ಷದಲ್ಲಿ, ಅಂಥಾ ತಪ್ಪಿಹೋದ ಮನುಷ್ಯನಿಂದ ಕೊಂಡುಕೊಳ್ಳೋಣಾದ ತಮಾಂ ಮರಗಳನ್ನಾಗಲೀ ಕೆಲವು ಮರಗಳನ್ನಾಗಲೀ ಪುನಹಾ ವಿಕ್ರಯಿಸುವದಕ್ಕೆ ಸೂಪರ್‌ಟೆಂಡೆಂಟರವರಿಗೆ ಯಬ್ತ್ಯಾರಿ ಯಿರತಕ್ಕದ್ದು, ಅದರಿಂದ ಉಂಟಾಗುವ ಯಾವ ನಷ್ಟಕ್ಕಾಗಲಿ ಸದರೀ ಅವ್ವಲ್ ಕ್ರಯದಾರನು ಗುರಿಯಾಗಿರತಕ್ಕದ್ದು. ಪರಂತು ಅಂಥಾ ಪುನರ್ವಿಕ್ರಯದಿಂದ ಉಂಟಾಗುವ ಯಾವ ಆದಾಯಕ್ಕಾಗಲೀ ಸದರೀ ಅವ್ವಲ್ ಕ್ರಯದಾರನು ಹಕ್ಕುದಾರನಾಗಿರತಕ್ಕದ್ದಲ್ಲವು.

V. ಪ್ರತಿ ಕ್ರಯದಾರನೂ ತನ್ನಿಂದ ಕೊಂಡುಕೊಳ್ಳೋಣಾದ ಪೂರಾ ತೇದಾದಿನ ಕಿಮ್ಮತ್ತನ್ನು, ಹರಾಜ್ ತಾರೀಖು ಲಾಗಾಯ್ತು 30 ದಿವಸಗಳೊಳಗಾಗಿ ಪಾವತೀ ಮಾಡತಕ್ಕದ್ದು, ಹಾಂಗೆ ಪಾವತೀ ಮಾಡದೆ ತಪ್ಪಿದರೆ, ಮೊದಲೇ ಯಿಡೋಣಾದ ಡಿಪಾಜಿಟ್ ವೊಬಲಗು ದಂಡವಾಗಿ ಸರಕಾರಕ್ಕೆ ಕೀರಿಸಿಕ್ಕೊಳ್ಳಲ್ಪಡುವದು.

VI. ಯಾವ ಕ್ರಯದಾರನೇ ಆಗಲಿ, ತಾನು ಕ್ರಯಕ್ಕೆ ಪಡಕೊಂಡ ಮರಗಳ ಪೂರಾ ಕಿಮ್ಮತ್ತನ್ನು ಪಾವತಿ ಮಾಡಿ, ಸಾಗಿಸುವ ಬಗ್ಯೆ ಛೂರೆನ್ಸು ಆಫೀಸರವರಿಂದ ಬಂದು ಲೈಸೆನ್ಸು ಪಡೆಯುವವರಿಗೂ, ಯಾವ ಮರವನ್ನೂ ಸಾಗಿಸಕೂಡದು.

VII. ಮೈಸೂರಲ್ಲಿರತಕ್ಕ ಉಡ್ ಯಾರಡ್‌ನಲ್ಲಿ ಕೊಂಡು ಕೊಳ್ಳಲ್ಪಟ್ಟು ಮೇಲ್ಕಂಡಂತೆ ವೊಬಲಗು ಪಾವತೀ ಮಾಡಲ್ಪಟ್ಟ ಮರಗಳು ಹರಾಜ್ ತಾರೀಖು ವೊದಲು 30 ದಿವಸಗಳೊಳಗೆ ಯಾವ ಕಾಲದಲ್ಲಾಗಲೀ ಉಡ್‌ಯಾರಡ್ ಬಾಡಿಗೆ ಕೊಡವೇನೇ ಸಾಗಿಸಲ್ಪಡಬಹುದು, ಆದರೆ ಹರಾಜು ತಾರೀಖು ಲಾಗಾಯಿತು 30 ದಿವಸಗಳಿಗೆ ಜಾಸ್ತಿಯಾಗಿ ವುಡ್‌ಯಾರಡಿನಲ್ಲಿ ಬಿಡಲ್ಪಟ್ಟರೆ, ಅವು ಹರಾಜ್ ತಾರೀಖು ಲಾಗಾಯಿತು ಲಾಟ್ 1ಕ್ಕೆ ತಿಂಗಳು 1ಕ್ಕೆ 8 ಆಣೆ ಪ್ರಕಾರ ಉಡ್‌ಯಾರಡ್ ಬಾಡಿಗೆ ಛಾರ್ಜ್ ಮಾಡಲ್ಪಡುವದು.

VIII. ತಮಾಂ ಇತರ ಡಿಪೊಗಳ ವಿಷಯದಲ್ಲಿ, ಮರವು ಬಗರ್ ಬಾಡಿಗೆಯಿಂದ ಮೂರು ತಿಂಗಳುವಳಗಾಗಿ ಸಾಗಿಸಲ್ಪಡತಕ್ಕದ್ದು; ಇದಕ್ಕೆ ತಪ್ಪಿದರೆ ಗೊತ್ತಾದ ವಾಯಿದೆ ಅತಿಕ್ರಮಿಸಿದ ದಿವಸಗಳಿಗೆ ಲಾಟ್ 1ಕೆ ರೋಜು 1ಕ್ಕೆ ವಂದಾಣಿ ಪ್ರಕಾರ ಬಾಡಿಗೆ ಛಾರ್ಜ್‌ಮಾಡಲ್ಪಡುವದು.

IX. ಪ್ರತಿ ಕ್ರಯದಾರನೂ, ಮರಗಳು ಸಾಗಿಸುವ ಬಗ್ಯೆ ಅವನಿಗೆ ಕೊಡೋಣಾದ ಲೈಸೆನಿನ ಷರತ್ತುಗಳ ಪ್ರಕಾರ ನಡೆದು ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

X. ಸೂಪರ್‌ಟೆಂಡೆಂಡರವರು, ಖರೀದಿಗೆ ಪಡಕೊಳ್ಳಲಿಚ್ಛೈಸುವ ಜನಗಳಿಗೆ ಯಾವ ಸಬಬೂ ತಿಳಿಸದೇನೆ ಯಾವ ಕಾಲದಲ್ಲಾಗಲೀ ಹರಾಜನ್ನ ವಜಾ ಮಾಡುವದಕ್ಕೂ, ಯಾವ ಲಾಟಿನ ಛಡ ಸವಾಲೇ ಆಗಲೀ ಅಂಗೀಕರಿಸುವದಕ್ಕೆ ಅನರ್ಹವಾದ್ದೆಂದು ಕಾಣಬುಂದರೆ ಅಂಥಾ ಲಾಟನ್ನ ವಾಪಸ್ ತೆಗೆದುಕೊಳ್ಳುವದಕ್ಕೂ ಸ್ವತಂತ್ರರಾಗಿರತಕ್ಕದ್ದು.

ಹರಾಜು ರೋಜಿನಾ ಪ್ರಾತಃಕಾಲ 7 ಘಂಟೆಗೆ ಆರಂಭಿಸಲ್ಪಟ್ಟು ಮಧ್ಯಾಹ್ನ 11 ಯಾ 12 ಘಂಟೆವರಿಗೂ ನಡಿಸಲ್ಪಡುವದು.

---

ತಾರೀಖು 19ನೇ ಆಗಸ್ಟ್ 1885.

ನಂ. 108.—ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನೆಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸವಿಾಧಾನಕ್ಕೋಸ್ಕರ ಕ್ರಮಜ್ರಕಾರ ಜಪ್ತೀಮಾಡಲ್ಪ

ಟ್ಟುರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಿಂದ ಕಂಡ ತಖ್ತೀಯಲ್ಲಿ ನಮೂದಿರುವ ಸ್ಥಳವಲ್ಲೂ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು, ಮತ್ತು ಸದರೀ ತಾರೀಖುಗಳಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಶುರುವಾಗಿ, ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು, ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ವೈಕೀ ೀಕಡಾ 25ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ವೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಟೆಂಬ ಇತರ ಯಾವ ಮನುಷ್ಯನಾಗಲಿ ಬಡ್ಡೀ ವ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುವ್ಕೂಫ್ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮಮಾದ್ಯಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಧರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜಾ ಬಿಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಆಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂತಾ ಆಪ್ಪೀಲ್‌ನಲ್ಲಿ ಆಗುವ ಆಬೈರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟಿರುತ್ತೆ.

| ತಿಪ್ಪೂರು. | ತಾಲ್ಲೂಕು. | ಜಿಲ್ಲೆ. | ಗ್ರಾಮಗಳು. | ಜೋಡಿದಾರರ ಹೆಸರು. | ಅಂದಾಜಾ ಬೀಜವರೀ. | ಅಂದಾಜು ಹುಟ್ಟುವ ಸ್ಥಿರ ಯಾ ಕಿರಿದು. | ಸಾಲೀಯಾನಾ ಸರ್ಕಾರಕ್ಕೆ ಕೊಡಬೇಕಾದ ಕಿಸ್ತಿ. | ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೊ ಅಂಥಾ ಸರಕಾರದ ಕಂದಾಯದ ಬಾಕಿ. | ಹರಾಜು ತಾರೀಖು ವಗೈರೆ. |
|---|---|---|---|---|---|---|---|---|---|
| ಕಡೂರು. | ನಾಗಮಂಗಲ. | ಮಂಡ್ಯ. | ಹಂಪಾಪುರ | ರಾಮಯ್ಯ, ಇತರ 46ಮಂದಿ. | ಎ. ಗುಂ. ಗ. 307 35 0 | ರೂ. ಆ. ಪೈ. 647 12 0 | ರೂ. ಆ. ಪೈ. 195 8 0 | ರೂ. ಆ. ಪೈ. 72 9 10 | 1885ನೇ ಇಸವಿ ಸೆಪ್ಟಂಬರ್ 28ರಲ್ಲಿ ಚಿಕ್ಕಮಗಳೂರು ತಾಲ್ಲೂಕು ಕಛ್ಚೇರಿಯಲ್ಲಿ ಅಸಿಸ್ಟೆಂಟ್ ಕಮ್ಮಿಷನರವರ ರೂಬರು. |

ಬಿಎೋಜೀಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಸೆಕ್ರಿಟೇರಿ.